**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 69/2019**

**ವಾ.ಸಾ-2**

**ಸಾಕ್ಷಿಗೆ ದಿನಾಂಕಃ 04-09-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಟಿ.ಕೆ.ಆರ್.ಜಿ ಪ್ರತಿವಾದಿಯರ ಪರ ವಕೀಲರಿಂದಃ**

1. ನನ್ನ ತಂದೆಗೆ ನಾನು ಮತ್ತು ವಾದಿ 2 ಜನ ಮಕ್ಕಳು. ವಾದಿಗೆ ನಾನು ಅಣ್ಣನಾಗಬೇಕು. ವಾದಿಗೆ 2 ಜನ ಮಕ್ಕಳು. ಸದರಿಯವರ ಪೈಕಿ ಒಂದು ಗಂಡು ಒಂದು ಹೆಣ್ಣು. ನಾನು ಮತ್ತು ವಾದಿಯು ಸುಮಾರು 30 ವರ್ಷಗಳ ಹಿಂದೇ ವಿಬಾಗವಾಗಿದ್ದೇವೆ. ವಾದಿ ಮತ್ತು ಅವರ ಮಕ್ಕಳು ಬೇರೆ ಕಡೆ ವಾಸವಾಗಿದ್ದಾರೆ ಹಾಗೂ ನಾನು ಮತ್ತು ನನ್ನ ಮಕ್ಕಳು ಬೇರೆ ಕಡೆ ವಾಸವಾಗಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇತ್ತೀಚೆಗೆ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದು ನುಡಿಯುವರು. ನನ್ನ ಮತ್ತು ನನ್ನ ಅಣ್ಣನ ನಡುವೆ ವಿಭಾಗವಾಗಿದೆ ಎಂದು ತೋರಿಸಲು ಪಾಲು ಪಟ್ಟಿ ಇದೆ.

2. ವಾದಿಯು ಈ ದಾವೆಯಲ್ಲಿ ಹಾಜರಪಡಿಸಿರುವ ದಾಖಲಾತಿಗಳನ್ನು ನಾನು ತಿಳಿದುಕೊಂಡಿದ್ದೇನೆ. ಜಮೀನಿನ ಖಾತೆ ಮಾಡಿಕೊಡುವಂತೆ ವಾದಿಯು ದಾವೆ ಸಲ್ಲಿಸಿದ್ದಾರೆ. ನನ್ನ ಮತ್ತು ನನ್ನ ಅಣ್ಣನ ನಡುವೆ ಆಗಿದೆ ಎಂದು ಹೇಳಲಾಗುವ ಪಾರಿಕತ್ತನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ವಾದಿಯು ವ್ಯವಸಾಯ ಮಾಡಿಕೊಂಡು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಮಕ್ಕಳು ಕೂಡ ವಿದ್ಯಾವಂತರಿದ್ದಾರೆ ಎಂದರೆ ಸರಿ. ವಾದಿಯೇ ಆರೋಗ್ಯ ಸಮಸ್ಯೆಯಿಂದ ಅಧಿಕಾರ ಪತ್ರವನ್ನು ನನಗೆ ಕೊಟಟಿದ್ದಾರೆ. ಅಧಿಕಾರ ಪತ್ರವನ್ನು ಮಗನಿಗೆ ಕೊಡುವಂತೆ ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಮಗನು ಬೆಂಗಳೂರಿನಲ್ಲಿ ಇರುತ್ತಾರೆ ಎಂದು ಉತ್ತರಿಸುವರು. ನನ್ನ ತಮ್ಮನಾದ

ವಾದಿಯು ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾದರೆ ಸತ್ಯಾಂಶ ಹೊರಬರುತ್ತದೆ ಎಂದು ನಾನು ಅಧಿಕಾರ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯು ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 45 ಅಡಿ ಇದೆ. ದಾವಾ ಆಸ್ತಿಯು ನಮಗೆ ಗ್ರಾಮಪಂಚಾಯಿತಿಯ ಮುಖಾಂತರ ಬಂದಿದೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಕುಡಿಯುವ ನೀರಿನ ಸೇದುವ ಬಾವಿಗೆ ಎಂದು 2 ಗುಂಟೆ ಜಾಗವನ್ನು ಊರಿನವರ ಅನುಕೂಲಕ್ಕಾಗಿ ಪಂಚಾಯಿತಿಗೆ ಬಿಟ್ಟು ಕೊಟ್ಟಿದ್ದರು ಆದ ಕಾರಣ ದಾವಾ ಆಸ್ತಿಯನ್ನು ನಮಗೆ ಕೊಟ್ಟಿದ್ದಾರೆ ಎಂದು ನುಡಿಯುವರು. ಈ ಕುರಿತು ಯಾವುದೇ ದಾಖಲಾತಿಗಳು ಇಲ್ಲ.

4. ದಾವಾ ಆಸ್ತಿಯನ್ನು ನಮಗೆ ಮಂಜೂರು ಮಾಡಿರುವ ಬಗ್ಗೆ ಪಂಚಾಯಿತಿಯವರು ನಮಗೆ ದಾಖಲಾತಿಯನ್ನು ನೀಡಿದ್ದಾರೆ. ಮಂಜೂರಾತಿ ಪತ್ರವನ್ನು ಕೂಡ ಕೊಟ್ಟಿದ್ದಾರೆ. ನಮಗೆ ಪಂಚಾಯಿತಿಯಿಂದ ದಾವಾ ಆಸ್ತಿಯನ್ನು ಯಾವುದೇ ರೀತಿಯಲ್ಲಿ ಮಂಜೂರಾತಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಬೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ.

5. 1992 ರಲ್ಲಿ ದಾವಾ ಸ್ವತ್ತನ್ನು ವಾದಿಗೆ ನೀಡಲು ನಿರ್ಣಯ ಮಾಡಿತ್ತು ಎಂದರೆ ಸರಿ. ಸದರಿ ನಿರ್ಣಯದ ವಿರುದ್ದ ಪ್ರತಿವಾದಿಯು ಜಿಲ್ಲಾಪಂಚಾಯಿತಿಯವರಿಗೆ ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮನವಿಯಲ್ಲಿ ಜಿಲ್ಲಾಪಂಚಾಯಿತಿಯು ವಾದಿಗೆ ಮಂಜೂರು ಮಾಡಿರುವುದು ತಪ್ಪು ಮತ್ತು ದಾವಾ ಅಸ್ತಿ ಪ್ರತಿವಾದಿಯ ಆಸ್ತಿ ಎಂದು ತೀರ್ಮಾನ ಮಾಡಿತ್ತು

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉಚ್ಚನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆಗಿದೆ ಎಂದು ನುಡಿಯುವರು.

6. ಜಿಲ್ಲಾಪಂಚಾಯಿತಿಯ ಮೇಲ್ಮನವಿ ಸಂಖ್ಯೆ 293/1998 ರ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. **ಈ ಹಂತದಲ್ಲಿ ಸಾಕ್ಷಿಗೆ ಸದರಿ ಮೇಲ್ಮನವಿ ಯಲ್ಲಿ ಹೊರಡಿಸಲಾದ ಅಂತಿಮ ಆದೇಶದ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು.**

7. ನಿಡಿ 1 ರ ವಿರುದ್ಧ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆದೇಶವಾಗಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಛಾಯ ಚಿತ್ರಗಳು ದಾವಾ ಸ್ವತ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

8. ದಾವಾ ಸ್ವತ್ತು ಕೇವಲ 30X40 ಅಡಿ ಮಾತ್ರ ಇದೆ ಎಂದರೆ ಸರಿಯಲ್ಲ. ಸದರಿ 38X40 ರ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ನಂಜುಂಡೇಗೌಡರ ಮನೆ, ದಕ್ಷಿಣಕ್ಕೆ ಮನೆ, ಉತ್ತರಕ್ಕೆ ಗಂಗೇಗೌಡರ ಮನೆ ಮತ್ತು ದಕ್ಷಿಣಕ್ಕೆ ಗ್ರಾಮಠಾಣಾ ಎಂದರೆ ಸರಿಯಲ್ಲ. ಸದರಿ ಆಸ್ತಿಯು  ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿಯ ತಂದೆಯೇ ಸ್ವಾಧೀನಾನುಬೋಗದಲ್ಲಿದ್ದರು ಮತ್ತು ಸದರಿಯವರ ತಂದೆಯ ಮರಣಾನಂತರ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಚಕ್ಕುಬಂದಿಯ ಜಾಗವನ್ನು ಪ್ರತಿವಾದಿಯು ಅವರ ಸಂಬಂಧಿಕರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುವರು.

9. ನಿಪಿ 3 ರಲ್ಲಿರುವ ಪೆಟ್ಟಿಗೆ ಅಂಗಡಿಯು ದಾವಾ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಳ್ಳುವಂತೆ ಪ್ರತಿವಾದಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಪಂಚಾಯಿತಿ ಅದ್ಯಕ್ಷರು ನನ್ನ ಸ್ನೇಹಿತರಾಗಿರುವುದರಿಂದೆ ಪ್ರತಿವಾದಿಯ ಅರ್ಜಿ ಬಾಕಿ ಇಟ್ಟಿದಾದ್ದಿರ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ತಕರಾರು ಸಲ್ಲಿಸಿರುವುದರಿಂದ ವಿಚಾರಣೆಗೆ ಬಾಕಿ ಇದೆ ಎಂದು ನುಡಿಯುವರು. ಇವತ್ತಿಗೂ ಕೂಡ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

10. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಧನಕರುಗಳನ್ನು ಮತ್ತು ಕುರಿಯನ್ನು ಕಟ್ಟಿ ಹಾಕಲು ಸುತ್ತಲೂ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸದರಿ ಜಾಗದಲ್ಲಿ ತೆಂಗಿನಕಾಯಿಗಳನ್ನು ಕೂಡ ಇಟ್ಟು ಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಪ್ರತಿವಾದಿಯರು ನಿಪಿ 2 ರಂತೆ ನಮಗೆ ನೊಟೀಸು ಕೊಟ್ಟಿದ್ದರು ಎಂದರೆ ಸರಿ. ನಿಪಿ 2 ಕ್ಕೆ ನಾವು ಯಾವುದೇ ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ದಾವಾ ಆಸ್ತಿಯೂ ಪ್ರತಿವಾದಿಗೆ ಸೇರಿದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**